
ಆಗ ಈಗಿನಂತೆ ಬಂದವರಿಗೆ ಅರ್ಧ ಕಪ್ ಕಾಫಿ ಕೊಡುವುದೂ, ಅವರು 'ಅದು ಜಾಸ್ತಿ, ಸ್ವಲ್ಪ ಕಡಿಮೆ ಮಾಡಿ' ಅನ್ನುವುದೂ ಎಲ್ಲ ಸೀನ್ ಇರಲಿಲ್ಲ. ಲೋಟದ ತುಂಬ ಕಾಫಿ ಜೊತೆಗೆ ಬಾಳೆಹಣ್ಣು, ತುಪ್ಪ, ಸಕ್ಕರೆ. ಇದೆಂತಹ ಕಾಂಬಿನೇಶನ್ ಅಂತ ಕೇಳಬೇಡಿ – ಅವಾಗ ಇದ್ದಿದ್ದೇ ಹಾಗೆ. ಮದುವೆ ಮನೆಗಳಲ್ಲಿ ಬಾಳೆ ಎಲೆ ದೊನ್ನೆಗಳಲ್ಲಿ ಎಲ್ಲರಿಗೂ ಕಾಫಿ ಸರಬರಾಜು. (ದೊನ್ನೆಗಳು ಅಂಗಡಿಗಳಲ್ಲಿ ಸಿಗುತ್ತಿದ್ದವು). ಬಾಳೆ ಎಲೆ ಊಟ. ಜೀರೋ ವೇಸ್ಟ್. ಚಪ್ಪರದ, ಮಂಟಪದ ಅಲಂಕಾರಕ್ಕೂ ಬಾಳೆಕಂದು. ಬಾಳೆಗೊನೆಗಳನ್ನು ಮೇಲಿನಿಂದ ತೂಗುಬಿಟ್ಟಿರುತ್ತಿದ್ದರು. ಮನೆಕೆಲಸಕ್ಕೆ ಬರುವವರು ಆ ಕಾಲದಲ್ಲಿ ತಮ್ಮ ತಮ್ಮ ಲೋಟಗಳನ್ನು ಬೇರೆ ಬೇರೆ ಇಟ್ಟುಕೊಳ್ಳುತ್ತಿದ್ದರು. ಚೆನ್ನಿ ಮಾತ್ರ ಬೇರೆಯವರು ಕುಡಿದ ಲೋಟದಲ್ಲಿ ಕುಡಿಯಲಾರೆ ಎಂದು ಬಾಳೆ ಎಲೆಯನ್ನು ಬಾಡಿಸಿ ಲೋಟದ ಆಕಾರ ಮಾಡಿ ಅದರಲ್ಲಿ ಕಾಫಿ ಕುಡಿಯುತ್ತಿದ್ದಳು.

ಅಜ್ಜಿಯ ಮನೆಗೆ ರಜೆಯಲ್ಲಿ ಹೋದಾಗ ಅಲ್ಲಿ ಅಡುಗೆಗೆ ಸಹಾಯ ಮಾಡಲು ಗುರೊಳಜ್ಜಿ ಬರುತ್ತಿದ್ದರು. ಒಂದು ದಿನ ಬೆಳಿಗ್ಗೆ ಅವರು ಜೋರಾಗಿ ಯಾರಿಗೊ ಬಯ್ಯುತ್ತಿದ್ದರು. ಅವರು ಬೆಳಿಗ್ಗೆ ತಿಂಡಿಯಹೊತ್ತಿಗೆ ತಯಾರಿಸಿದ್ದ ಸ್ಟ್ರಾಂಗ್ ಕಾಫಿಯನ್ನು ಬೆಕ್ಕು ಉರುಳಿಸಿ ಚೆಲ್ಲಿತ್ತು. ಆದರೆ ನಿಜವಾಗಿ ಅದು ನನ್ನ ಕಸಿನ್ ಒಬ್ಬ ಒಲೆಯ ಕಟ್ಟೆಯ ಮೇಲೆ ಹತ್ತಿ ಡಬ್ಬಿಯಿಂದ ಬೆಲ್ಲದುಂಡೆಯನ್ನು ತೆಗೆದುಕೊಂಡು ಗಡಿಬಿಡಿಯಲ್ಲಿ ಕೆಳಗಿಳಿಯುವಾಗ ಕಾಲು ತಾಗಿ ಕಾಫಿ ಪಾತ್ರೆ ಉರುಳಿಹೋಯಿತು. ಚೆಲ್ಲಿಹೋದ ಕಾಫಿಯನ್ನೇ ಭಯ ಆತಂಕದಿಂದ ನೋಡುತ್ತಿದ್ದ ಅವನ ಸ್ಥಿತಿ, ಭಾನುಮತಿಯ ಮುತ್ತಿನಹಾರ ಕಡಿದು ಚೆಲ್ಲಾಡಿದ ಮುತ್ತುಗಳನ್ನು ನೋಡುತ್ತಿದ್ದ ದುರ್ಯೋಧನನ ಸ್ಥಿತಿಗಿಂತ ಕಡಿಮೆಯೇನಾಗಿರಲಿಲ್ಲ. ಹಾಲು ಕುಡಿಯಲು ಬಂದ ಬೆಕ್ಕನ್ನು ಓಡಿಸುವಾಗ ಆದ ಅನಾಹುತ ಅದು ಅಂತ ಅಜ್ಜಿಗೆ ಹೇಳಿ ಪೆಟ್ಟಿನಿಂದ ಬಚಾವಾದ. ಅಜ್ಜಿ 'ಎಂಥಾ ಸ್ಟ್ರಾಂಗ್ ಕಾಪಿ' (ಅವರು ಹೇಳುತ್ತಿದ್ದುದೇ ಹಾಗೆ), 'ಒಂದು ಚರಿಗೆ ತುಂಬ ಇತ್ತು ತಂಬಾಲು ಹಾಕಿ ಮಾಡಿದ್ದು... ಹಾಳಾಗಿ ಹೋಯ್ತು' ಅಂತ ಚೆಲ್ಲಿದ ಕಾಫಿಗೆ ಮರುಗುತ್ತಿದ್ದರು. ಅದು ಸಿಮೆಂಟ್ ನೆಲದ ಮೇಲೆ ದಪ್ಪ ಕಾಫಿ ನಿಧಾನವಾಗಿ ಹರಿಯುತ್ತಿತ್ತು. ಅಜ್ಜಿ ಒರಸುವ ಬಟ್ಟೆ ತರಲು ಬಯ್ಯುತ್ತಲೇ ಹೋದರು. ಈ ಅಜ್ಜಿ ತುಂಬ ಚೆನ್ನಾಗಿ ತಿಂಡಿಗಳನ್ನು ಮಾಡುತ್ತಿದ್ದರು. ಅದ್ರಲ್ಲೂ ಸಿಹಿ ಆಪೆ ಎರೆಯಪ್ಪವನ್ನು ಬಳಪದ ಗುಳಿ ಕಾವಲಿಯಲ್ಲಿ ಮಾಡಿ ಬೆಣ್ಣೆ ಹಾಕಿ ಕೊಡುತ್ತಿದ್ದರು. ಸಂಜೆಯ ಕಾಫಿ ಹೊತ್ತಿಗೆ ಅದು ಮಂಗಳೂರು ಬನ್ಸ್‌ಗಿಂತಲೂ ರುಚಿ. ಈಗ ಮೈಸೂರಿನ ಪಟ್ಟಾಭಿ ಬೇಕರಿಯಲ್ಲಿ ಸಿಗುವ ಕೇರಳ ಶೈಲಿಯ ನೆಯ್ಯಪ್ಪ ತಿನ್ನುವಾಗ ನನಗೆ ಬಾಲ್ಯದ ಆ ಎರೆಯಪ್ಪ ನೆನಪಾಗುತ್ತದೆ.




'ಒಣಕಾಫಿ' ಅಂತ ಒಂದಿರುತ್ತಿತ್ತು. (ಸ್ಟಾರ್ ಹೋಟೆಲ್‌ನ ಬ್ಲ್ಯಾಕ್ ಕಾಫಿಯಂತೆ) ಕೆಲವು ಮನೆಗಳಲ್ಲಿ ಹಾಲು ಕರೆಯುವ ದನ–ಕರು ಹಾಕುವ ಸಮಯವಾಗಿದ್ದರೆ ಸ್ವಲ್ಪ ದಿನ ಕರಿಕಾಫಿಯನ್ನೇ ಕುಡಿಯುವ ಅನಿವಾರ್ಯತೆ ಬಂದೊದಗುತ್ತಿತ್ತು. ನಮ್ಮ ಮನೆಯಲ್ಲಿ ಮೂರುನಾಲ್ಕು ಎಮ್ಮೆಗಳಿದ್ದುದರಿಂದ ಹಾಲಿಲ್ಲದ ಸಂದರ್ಭ ಬರುತ್ತಿರಲಿಲ್ಲ. ಈಗ ಬೆಳಗೆ ಎದ್ದರೆ ಕಾಫಿ ಮೇಕರ್‌ನ ಕಾಫಿ, ನಂದಿನಿ ಹಾಲು, ಕಾಫಿ ಡೇ ಪುಡಿ... ಕುಡಿಯಲು ನಾನಾ ನಮೂನೆಯ ಪಿಂಗಾಣಿ ಲೋಟಗಳು. ಒಳ್ಳೆ ಕೆನೆ ಬಣ್ಣದ ಹಿಡಿಕೆಯುಳ್ಳ ದೊಡ್ಡ ಮಗ್‌ಗಳ ಮೇಲೆ coffee ಅಂತ ಸುಂದರವಾಗಿ ಬರೆದಿದೆ. ಇನ್ನೊಂದು ತರದ ಲೋಟಗಳು ಇದಕ್ಕೆ ತದ್ವಿರುದ್ಧವಾಗಿ ಒಳ್ಳೆ ಕಪ್ಪು ಬಣ್ಣದವು. ತೆಳ್ಳಗೆ ಉದ್ದಕ್ಕೆ ಮಾಟವಾಗಿವೆ. ಕೆಂಪು ಬಣ್ಣದ ಮಣ್ಣಿನ ಒಂಟಿ ಲೋಟವೊಂದು ಗೆಳತಿಯೊಬ್ಬಳ ಕೊಡುಗೆ. ವರ್ಲ್ಡ್ ಕಪ್ ಫುಟ್‌ಬಾಲ್ ನೆನಪಿಸುವ ಕಪ್‌ಗಳು. ಮಗ ಇಸ್ರೇಲ್‌ನಿಂದ ತಂದ ಸುಂದರವಾದ ಕಾಫಿ ಮಗ್. ಇನ್ನೂ ಯಾರೋ ಕೊಟ್ಟ ಲಾವೊಪಾಲ ಪಿಂಗಾಣಿ ಕಪ್‌ಗಳು. 'ದಿನಾ ಒಂದೊಂದರಲ್ಲಿ ಕಾಫಿ ಕುಡಿದರೆ ತಿಂಗಳುದ್ದಕ್ಕೂ ಹೊಸ ಕಪ್‌ನಲ್ಲಿ ಕುಡಿಯಬಹುದು' ಅಂತ ಬೆಳಿಗ್ಗೆ ಪೇಪರ್ ಓದುತ್ತಾ ಕಾಫಿ ಕುಡಿಯುವಾಗ ಅಜ್ಜಿಯ ಕಾಲದಲ್ಲಿ ಕಾಫಿಯಿಲ್ಲದ ಬೆಳಗು ಹೇಗಿದ್ದಿರಬಹುದು ಎಂದು ಊಹಿಸುತ್ತೇನೆ.

ಒಮ್ಮೆ ಹಳೆ ಉಪ್ಪರಿಗೆಯಲ್ಲಿ ಅಜ್ಜಿ ಏನನ್ನೋ ಹುಡುಕುತ್ತಿದ್ದಾಗ ನಾನೂ ಮಡಕೆ ಕುಡಿಕೆಗಳ ಮುಚ್ಚಳ ತೆಗೆದು ನೋಡುತ್ತಿದ್ದೆ. ಉದ್ದನೆಯ ಮರದ ಕಲಬಿ (ಪೆಟ್ಟಿಗೆ)ಯಲ್ಲಿ ಗಾಜಿನ ಬಾಟಲುಗಳಲ್ಲಿ, ಮಡಕೆ ಕುಡಿಕೆಗಳಲ್ಲಿ ಏನೇನೋ ಇತ್ತು. ಅಜ್ಜಿ ಕರು ಹಾಕಿದ ಎಮ್ಮೆಗೆ ಕಷಾಯ ಮಾಡಲು ಗಜ್ಜುಗದ ಕಾಯಿ ಹುಡುಕುತ್ತಿದ್ದರು. ಒಂದು ಮಡಕೆಯ ಮುಚ್ಚಳ ತೆಗೆದು 'ತೋ ಇದು ಚೆಗಟೆ ಬೀಜ' ಅಂದರು. 'ಅದನ್ನು ಯಾಕೆ ಇಟ್ಟಿದೀರಿ ಅಜ್ಜಿ' ಅಂದೆ. 'ಕಷಾಯ ಮಾಡಕ್ಕೆ. ಮೊದಲೆಲ್ಲ ಕಾಫಿ ಇರಲಿಲ್ಲ, ಕೊತ್ತಂಬರಿ ಬೀಜದ ಕಷಾಯ, ಜೀರಿಗೆ ಕಷಾಯ ಅಷ್ಟೆ' ಅಂದರು. ಅಯ್ಯೊ ಪಾಪ ಅಜ್ಜಿ ಅನ್ನಿಸಿತು

ಪೇಟೆಗೆ ಹೋದರೆ ನಮ್ಮ ಸಣ್ಣ ಊರಿನಲ್ಲೂ ಮಶೀನ್ ಕಾಫಿ. ದೊಡ್ಡ ಲೋಟದ ತುಂಬ ಒಳ್ಳೆ ಕಾಫಿ. ಥಾಯ್ಲೆಂಡ್ ಪ್ರವಾಸ ಹೋದಾಗ ಎಷ್ಟು ದುಡ್ಡು ಕೊಟ್ಟರೂ ಒಳ್ಳೆಯ ಕಾಫಿ ಸಿಗದೆ ಏನೋ ಕಳೆದುಕೊಂಡಂತಾಗಿತ್ತು. ಮನೆಗೆ ಬಂದು ಕಾಫಿ ಕುಡಿದ ಮೇಲೆ ಸಮಾಧಾನವಾಯಿತು. ಎಲ್ಲಿ ಹೋಗಿ ಎಷ್ಟು ವೈಭವದ ಪರಿಸರದಲ್ಲಿ ಕಾಫಿ ಕುಡಿದರೂ ಬಾಲ್ಯದ ಆ ನೀರು ಕಾಫಿಯೆ ರುಚಿ ಅನಿಸುತ್ತದೆ, ಯಾಕೋ? ■

## ನೆನಪುಗಳು

ನೆನಪುಗಳೇ  
ಘಾತುಕ;  
ಮರೆತೇನೆಂದರೆ ಮರೆತು  
ಮತ್ತೆ ಅವಳು ನೆನಪಾಗುವುದೇ  
ಪ್ರೀತಿಯ ಅದ್ಭುತ  
ಕೌತುಕ..!





## ಚಕ್ಕಂದ

ಪ್ರಕೃತಿಯ ಮೇಲೆ  
ಮಾನವನ ದೌರ್ಜನ್ಯ  
ನಿರಂತರ.. ಸ್ವಾರ್ಥ.. ಸ್ವಚ್ಛಂದ..;  
ಹೆಪ್ಪುಗಟ್ಟಿದ ಮೋಡಗಳನ್ನು  
ಕೆಲವೇ ಕ್ಷಣಗಳಲ್ಲಿ ಮಾಯವಾಗಿಸಿ  
ಆ ನಿಸರ್ಗವೂ ಆಡುತ್ತಿರಬಹುದೇ  
ಮಾನವನ ಆಸೆಗೆ ತಣ್ಣೀರೆರಚಿ  
ಒಂದು ಸಣ್ಣ ಕಣ್ಣಾಮುಚ್ಚಾಲೆ  
ಚಕ್ಕಂದ..!

–ಆರ್. ಸುನೀಲ್, ತರೀಕೆರೆ